ಬಹಳ ಉತ್ತಮವಾದುದು. ಆದನ್ನು ಪರಿಶೀಲಿಸಿ ನಗರದಲ್ಲಿರತಕ್ಕಂಥ ಎಲ್ಲಾ ಶಾಸನ–ಸಭಾ ಸದಸ್ಯರು, ಲೋಕಸಭಾ ಸದಸ್ಯರು, ಇವರನ್ನೆಲ್ಲಾ ಸೇರಿಸಿ, ತೀರ್ಮಾನ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕೋಮು ಗಲಭೆಗಳಲ್ಲಿ ಮೃತರಾದವರ ಅವಲಂಬಿತರಿಗೆ ಉದ್ಯೋಗ

191 (768): ಶ್ರೀ ಎ.ಎಂ. ಹಿಂಡಸ್‌ಗೇರಿ (ಹುಬ್ಬಳ್ಳಿನಗರ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ನೌಕರಿ ಕೊಡುವ ಬಗ್ಗೆ ಸರ್ಕಾರವು ನಿರ್ಧರಿಸಿದೆಯೇ;

ಆ. ಹಾಗಿದ್ದಲ್ಲಿ, ಆದೇಶ ಹೊರಡಿಸಲಾಗಿದೆಯೇ ?

ಶ್ರೀ. ಎಂ. ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):–

ಅ. ಹೌದು

ಆ. ಪರಿಶೀಲನೆಯಲ್ಲಿದೆ.

ಶ್ರೀ ಎ. ಎಂ. ಹಿಂಡಸ್‌ಗೇರಿ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ನೌಕರಿ ಕೊಡುವ ಬಗ್ಗೆ ಸರ್ಕಾರ ನಿರ್ಧರಿಸಿದೆಯೇ ಎಂದು ಪ್ರಶ್ನೆ ಕೇಳಿದ್ದೆ. "ಹೌದು" ಎಂದು ಹೇಳಿದ್ದಾರೆ. ಅದೇ 2ನೇ ಪ್ರಶ್ನೆಗೆ ಈ ಬಗ್ಗೆ ಆದೇಶ ಹೊರಡಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದರೆ, ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಅದು ಕ್ಲಿಯರ್ ಆಗಲಿಲ್ಲ. ಎರಡನೆಯದು 1990–91ನೇ ಇಸವಿಯಲ್ಲಿ ಗಲಭೆಯಾದಂಥ ಕಾಲದಲ್ಲೂ ಮೃತದ ಸಂಬಂಧಪಟ್ಟವರಿಗೆ ನೌಕರಿಗೆ ಕೊಡುತ್ತೇವೆಂದು ಅಶ್ಯೂರೆನ್ಸ್ ಕೊಟ್ಟಿದ್ದರು. ಇನ್ನೂ ಜಾರಿಗೆ ಕೊಟ್ಟಿಲ್ಲ. ಅದಕ್ಕೋಸ್ಕರ ಒಂದು ನಿಗದಿತ ಸಮಯದಲ್ಲಿ ಜಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೀರಾ ? Whether the direction has already been sent to the concerned D.Cs., and other officers?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ತಾತ್ವಿಕವಾಗಿ ಸರ್ಕಾರದವರು ನೌಕರಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. 6–1–93ರ ಸಚಿವ ಸಂಪುಟದ ಸಭೆಯಲ್ಲಿ, ಮತೀಯ ಗಲಭೆಯಲ್ಲಿ ಮೃತ ಹೊಂದಿದವರ ಕುಟುಂಬದಲ್ಲಿ ಸಂಪಾದನೆ ಮಾಡುತ್ತಿರುವ ಸದಸ್ಯರು ಮೃತಪಟ್ಟರೆ ಅವರ ಕುಟುಂಬಕ್ಕೆ ಮತ್ತೆ ಬೇರೆ ಯಾವುದೇ ರೀತಿಯಲ್ಲಿ ಆದಾಯ ಇಲ್ಲದಿದ್ದಲ್ಲಿ ಅವರ ಅವಲಂಬಿತರಲ್ಲಿ ಒಬ್ಬರಿಗೆ ಸರ್ಕಾರಿ ನೌಕರಿ ಕೊಡಬಹುದೆಂದು ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಅದರಂತೆ ಒಳಾಡಳಿತ ಇಲಾಖೆಯವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗೆ ಕರಡು ನಿಯಮಗಳನ್ನು ರೂಪಿಸುವಂತೆ ಹೇಳಿದೆ. ಕಾನೂನು ಮತ್ತು ಸಂಸದೀಯ ಇಲಾಖೆಯು ಇದರ ನಿಯಮಗಳನ್ನು ರೂಪಿಸಿ ಒಳಾಡಳಿತ ಇಲಾಖೆಗೆ 18–2–93ರಂದು ಹಿಂದಿರುಗಿಸಿರುತ್ತಾರೆ. ಅದು ಪರಿಶೀಲನೆಯಲ್ಲಿದೆ. ಈ ನಿಯಮಗಳನ್ನು ಜಾರಿ ಮಾಡಿದ ನಂತರ ಮತೀಯ ಗಲಭೆಗಳಲ್ಲಿ ಮೃತ ಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂದರೆ ಈ ತಿಂಗಳು 18ನೇ ತಾರೀಖು ಒಳಾಡಳಿತ ಇಲಾಖೆಗೆ ಬಂದಿದೆ. ಅದು ಪರಿಶೀಲನೆಯಲ್ಲಿ ಇದೆ. ಆದಷ್ಟು ಬೇಗ ತೀರ್ಮಾನ ಮಾಡಿ ಸಂಬಂಧಪಟ್ಟ ಕುಟುಂಬದವರಿಗೆ ನೌಕರಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಎಂ. ಹಿಂಡಸ್‌ಗೇರಿ:– ಈ ಹಿಂದೆ ಆಗಿರುವುದಕ್ಕೂ ಇದೇ ಹೇಳುತ್ತಿದ್ದರು. ಮತ್ತೆ ಮೊನ್ನೆ 2–3 ತಿಂಗಳಲ್ಲಿ ಗಲಭೆಯಾದಂಥ ಕಾಲದಲ್ಲಿ ಸುಮಾರು 78 ಜನ ರಾಯಚೂರಿನಲ್ಲಿ ತೀರಿಕೊಂಡರು. ಇದಕ್ಕೆ ರೂಲ್ಸ್ ರೆಗ್ಯುಲೇಷನ್ ಮಾಡಬೇಕೆಂದು ಹೇಳಿ ಟೈಮ್ ಹಾಳಾಗುತ್ತಿದೆ. ಆದಕ್ಕೆ ನಿಗಧಿಯಾದ ಸಮಯದಲ್ಲಿ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮತ್ತೆ ಒಂದು ಲಕ್ಷ ರೂಪಾಯಿ ಕೊಟ್ಟಿರುವ ಬಗ್ಗೆ ನನ್ನ ಪ್ರಶ್ನೆಗೆ ಅವತ್ತು ಉತ್ತರಕೊಟ್ಟಿದ್ದರು. ಮೊನ್ನೆ ನಾನು ನನ್ನ ಕಾನ್‌ಸ್ಟಿಟ್ಯೂಯೆನ್ಸಿಗೆ ಹೋಗಿದ್ದಾಗ ಡಿ.ಸಿ.ಯವರನ್ನು ಕೇಳಿದರೆ, ಇನ್ನೂ ತನಕ ನಮಗೆ ಅದರ ಬಗ್ಗೆ ಆರ್ಡರ್ ಬಂದಿಲ್ಲವೆಂದು ಹೇಳುತ್ತಾರೆ. ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ. ನೌಕರಿ ಕೊಡುವುದರಲ್ಲಿ ಆದಷ್ಟು ತೀವ್ರವಾಗಿ ಒಂದು ನಿಗದಿತ ಸಮಯದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಒಂದು ತಿಂಗಳು ಅಥವಾ 15 ದಿವಸ ಎಂದು ಸಮಯ ಹೇಳಬೇಕು. ಮತ್ತು ಧನ ಸಹಾಯ ಏನು ಬಿಡುಗಡೆ ಮಾಡುತ್ತೀರಿ ಅದನ್ನು ಆದಷ್ಟು ತೀವ್ರವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಆ ವಿಷಯವನ್ನು ನಾವು ಒಪ್ಪುತ್ತೇವೆ. ಆದರೆ it is based on rule of law.

ಸರ್ಕಾರ ಒಂದು ನೀತಿ ನಿರ್ಧಾರ ಮೊದಲು ಮಾಡುತ್ತದೆ. ಅದು ಆಚರಣೆಗೆ ಬರಬೇಕಾದರೆ ಕಾನೂನುಗಳನ್ನು ಮಾಡಿ, ನಿಯಮಗಳನ್ನು ಮಾಡಿ ಆಚರಣೆಗೆ ತರಬೇಕಾಗುತ್ತದೆ. ಅದು ಸ್ವಲ್ಪ ತಡವಾಗುತ್ತದೆ. ಮಾನ್ಯ ಸದಸ್ಯರು ಇದನ್ನು ತಿಳಿದು ಸಹಕರಿಸಬೇಕು.

ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿ.ಎಲ್. 2 ಪರವಾನಗಿ ನೀಡಿಕೆ.

192 (890): ಶ್ರೀ ಟಿ.ಬಿ. ಜಯಚಂದ್ರ (ಕಳಂಬೆಳ್ಳ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿಎಲ್–2 ಪರವಾನಗಿಗಾಗಿ ಹಣ ಕಟ್ಟಿ ಸರ್ಕಾರದ ಅನುಮತಿಗಾಗಿ ಕಾಯುತ್ತಿರುವ ಪರವಾನಗಿದಾರರ ಸಂಖ್ಯೆ ಎಷ್ಟು:

ಆ. ಪರವಾನಗಿದಾರರು ಹಣ ಸಂದಾಯ ಮಾಡಿದ್ದು, ಇದುವರೆಗೂ ಅನುಮತಿ ನೀಡದೆ ಇರಲು ಕಾರಣವೇನು ? ಹಾಗೂ ಪರವಾನಿಗೆ ನೀಡುವುದು ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. 152 ಪರವಾನಗಿ ಅರ್ಜಿದಾರರು.

ಆ. ಸಿಎಲ್–2 ಲೈಸನ್ಸ್‌ಗಳ ಹೆಚ್ಚಳಿಕೆ ಬಗ್ಗೆ ಹೆಚ್ಚು ಹೆಚ್ಚು ದೂರಿನ ಮನವಿಗಳ ಬರುವಿಕೆ ಇಂದಾಗಿ, ಸಿಎಲ್–2 ಲೈಸನ್ಸ್ ಮಂಜೂರು ಮಾಡುವುದನ್ನು ಸಧ್ಯಕ್ಕೆ ತಡೆಹಿಡಿಯಲಾಗಿದೆ.

1991ರ ಜನ ಗಣತಿ ಆಧಾರದ ಮೇಲೆ ಸಿಎಲ್–2 ಲೈಸನ್ಸ್‌ನ ಕೋಟಾವನ್ನು ಪರಿಷ್ಕರಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿಎಲ್–2 ಪರವಾನಗಿಗಾಗಿ ಹಣಕಟ್ಟಿ ಸರ್ಕಾರದ ಅನುಮತಿಗಾಗಿ ಕಾಯುತ್ತಾ ಇರುವ ಪರವಾನಗಿದಾರರ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಹೇಳಿದ್ದೇನೆ, ಅದಕ್ಕೆ 152 ಜನರು ಎಂದು ತಿಳಿಸಿದ್ದೀರಿ. ಪರವಾನಗಿದಾರರು ಹಣ ಸಂದಾಯ ಮಾಡಿದ್ದು ಇರುವರೆಗೂ ಅನುಮತಿ ನೀಡದೆ ಇರಲು ಕಾರಣ ಏನು ಅಂದರೆ, ಸಿಎಲ್–2